ಅಗಲಿಕೆಯ ದುಃಖವನ್ನು ಅದುಮಿ ಹಿಡಿದ ನಿರ್ಭಾವವಿತ್ತು. ಹೇಗೆ ಕೇಳಲಿ? ಮುಂದಿನ ಹತ್ತಾರು ದಿನಗಳಲ್ಲೂ ಈ ತಳಮಳವನ್ನು ಕಳೆಯದೇ ಕರ್ಮಾಂತರದ ವಿಧಿಗಳಲ್ಲಿ ವ್ಯಾಕುಲತೆಯಿಂದಲೆ ಒಳಗೊಂಡೆ. "ಅಮ್ಮಾ, ನಾನು ಯಾವ ತಪ್ಪೂ ಮಾಡಿಲ್ಲ. ನಿಮ್ಮನ್ನು ಎಂದೂ ನೋಯಿಸಿಲ್ಲ. ನನ್ನ ಮುಂದಿನ ಬಾಳು ಗೋಳಾಗದಂತೆ ನೀನೇ ಕಾಯಬೇಕು..." ಎಂದು ಪ್ರಾರ್ಥಿಸಿದೆ. ಲಲಿತಾ ಗಂಭೀರವಾಗಿದ್ದಳು. ಆಕೆಯ ರೀತಿಯೇ ಅದು – ಮತ್ತೀಗ ಸೂತಕದ ದಿನಗಳು. ಆದರೆ, ಆ ಪತ್ರ... ಸಿಕ್ಕಿರಬಹುದೆ? ಇದೇ ಕಾರಣವಾಗಿ ಇನ್ನುಳಿದ ಆಯುಷ್ಯ ಅತಂತ್ರವಾದೀತೇ? ಅಸಹನೀಯವೆನಿಸೀತೇ? ಏನಾದರೂ ಒಂದು ಒಡಂಬಡಿಕೆಯಲ್ಲಿ ಮುಂದುವರಿಯಲು ನಮ್ಮ ನಡುವೆ ಮಕ್ಕಳಿಲ್ಲ. ಮತ್ತೇನು? ಒಂದು ಧಿಕ್ಕಾರದ ನಿರೀಕ್ಷೆಯಲ್ಲಿ ನಿರಂತರವಾದ ಅನಾಥಪ್ರಜ್ಞೆ ಬಿಡದೆ ಅನುಸರಿಸಿ ಬರುತ್ತಿತ್ತು. ನಿದ್ರೆಯಿಲ್ಲದ ರಾತ್ರಿಗಳು ಭಯವನ್ನು ಮತ್ತೂ ಒತ್ತಿ ತುಂಬುತಿದ್ದವು. ಇಪ್ಪತ್ತು ದಿನಗಳ ಬಳಿಕ ಮತ್ತೆ ಮನೆಗೆ ಬಂದು ಬಾಗಿಲು ತೆರೆದಾಗ ಇಷ್ಟು ದಿನದ ಎಲ್ಲ ಚಡಪಡಿಕೆಗಳೂ ಒಟ್ಟಾಗಿ ನೂಕಿದಂತೆ ಅಲ್ಲಿಗೇ ಬಿದ್ದುಬಿಟ್ಟೆ.

ಅನಂತ ಆಕಾಶದ ವಿಸ್ತಾರವೆಲ್ಲಾ ಕಪ್ಪು ಕತ್ತಲಲ್ಲಿ ಒಂದೇ ಆಗಿರುವಾಗ, ದೂರದಲ್ಲೆಲ್ಲೋ ಪುಟ್ಟ ನಕ್ಷತ್ರವೊಂದು ಮಿಂಚಿದಂತೆ – ನೋಡಲು ಮೆಲ್ಲನೆ ಕಣ್ಣುತೆರೆದೆ. ಬಿದ್ದಲ್ಲೆ ಬಿಟ್ಟುಹೋಗಿದ್ದ ಪ್ರಜ್ಞೆ ಮತ್ತೆ ಮೆಲ್ಲನೆ ಮರಳತೊಡಗಿತ್ತು. ಇನ್ನೂ ಸ್ಪಷ್ಟವಿಲ್ಲದ ಕಣ್ಣಿನ ಮಸುಕಿನಲ್ಲಿ ಹತ್ತಿರ ಕುಳಿತಿದ್ದವಳು ಲಲಿತೆಯೇ ಅನ್ನುವುದು ಮನದಟ್ಟಾಯ್ತು. ಡಾಕ್ಟರ್ ಇರಬೇಕು, ಆಸ್ಪತ್ರೆಯ ಸಕಲ ಬಂಧ–ಗಂಧಗಳ ನಡುವಿನಿಂದ, "ಗಾಬರಿಯೇನಿಲ್ಲ, ಇನ್ನು ಗೆಲುವಾಗ್ತಾರೆ" ಅಂದುದು ಕೇಳಿಸಿತು. ಇನ್ನೊಮ್ಮೆ ಸಣ್ಣ ಮಂಪರು ಎಳೆದು ಕವಿದು ಬಂತು. ಮತ್ತೊಂದು ಎಚ್ಚರ ಮೈ ಮನಗಳನ್ನು ಸವರಿದಾಗ ನಾನು ಕಂಡ ದೃಶ್ಯ ನನ್ನ ಕನಸೇ ಇರಬಹುದು ಅನಿಸಿತು. ಎದುರಿಗೆ ಚೇರಲ್ಲಿ ಕುಳಿತ ಲಲಿತೆಯ ಹಿಂದೆ, ಎರಡೂ ಕೈಗಳನ್ನು ಆಕೆಯ ಹೆಗಲಿನಿಂದ ಇಳಿಬಿಟ್ಟು ನಿಂತಾಕೆ ನನ್ನ ಕ್ಷಮಾ ಅಲ್ಲವೇ? ಪಕ್ಕದಿಂದ ತನ್ನ ಮುಖವನ್ನು ಲಲಿತೆಯ ಕೆನ್ನೆಗೊತ್ತಿ ಕಾತರವೇ ಕಣ್ಣಾಗಿ ನನ್ನೆಡೆಗೆ ದಿಟ್ಟಿಸುತಿದ್ದಳು. 'ಇದು... ಇದು ನಿಜವೇ?...' 'ಸಾಕು, ಸಾಕೇ ಸಾಕು! ನನಗಿನ್ನೇನೂ ಬೇಡ!' ಹಾಗಾದರೆ... ಲಲಿತಾ ನನ್ನನ್ನು ಕ್ಷಮಿಸಿದಳೇ? ಅಲ್ಲ, ಏನೂ ತಿಳಿಯದೆ ಹೀಗಿರುವಳೇ? ಏನೇ ಆಗಿರಲಿ, ಈ ಒಂದು ಕ್ಷಣವೇ ನನ್ನ ಬದುಕಲ್ಲಿ ಶಾಶ್ವತವಾಗಿರಲಿ ಅಂದುಕೊಂಡು ಭಾರವಾಗಿ ತುಂಬಿದ ಕಣ್ಣುಗಳನ್ನು ಅಲ್ಲಿಗೇ ಮುಚ್ಚಿಕೊಂಡೆ. ಅಲ್ಲೆ ತುಳುಕಿದ ಹನಿಯೊಂದನ್ನು ಮೃದುವಾದ ತಣ್ಣಗಿನ ಕೈಯೊಂದು ನೇವರಿಸಿ ಒರೆಸಿತು. ಆ ಬೆರಳುಗಳನ್ನು ನನ್ನ ನಿಶ್ಶಕ್ತ ಕೈಯಿಂದ ಹಾಗೇ ಮೆಲ್ಲನೆ ಹಣೆಗೆ ಒತ್ತಿ ಹಿಡಿದೆ!

**ಶಶಿಕಲಾ ಬಾಯಾರು**

ಕಾಸರಗೋಡು ಜಿಲ್ಲೆಯ ಪೆರ್ಲ ಹುಟ್ಟೂರು. ಗಡಿನಾಡ ಬಾಯಾರು ವಾಸವಿರುವ ಊರು. ಕಸೂತಿ ಕಲೆಯಲ್ಲಿ ಹೆಚ್ಚಿನ ಆಸಕ್ತಿ ಮತ್ತು ಸ್ವಯಂ ಪರಿಶ್ರಮದ ಪರಿಣತಿ. ವಿಭಿನ್ನ ಶೈಲಿಯ ಚಿತ್ರಗಳಿಗೆ ಪ್ರದರ್ಶನಗಳಲ್ಲಿ ಪ್ರಶಂಸೆ ಮತ್ತು ಪತ್ರಿಕೆಗಳಲ್ಲಿ ಪ್ರಕಟಣೆ. ಪತ್ರ ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿ. ಪತ್ರಿಕೆಗಳಲ್ಲಿ ಪ್ರಕಟವಾದ ಹಲವಾರು ಪತ್ರಗಳು 'ಪತ್ರಾರ್ಜಿತ' ಎನ್ನುವ ಪುಸ್ತಕ ರೂಪ ಪಡೆದಿವೆ.